# ಜನಪದ ಆಚರಣೆಗಳು: ಒಂದು ಅವಲೋಕನ

**ಸತೀಶಕುಮಾರ ತಿಮ್ಮಣ್ಣನವರ**

ಜಾನಪದ ಸಂಶೋಧಕರು, ಹಾವೇರಿ ಜಿಲ್ಲೆ

DOI: https://doi.org/10.5281/zenodo.17255796

## ABSTRACT:

ಮಾನವನು ಪ್ರಕೃತಿಯ ಆರಾಧನೆಯನ್ನು ಮಾಡುತ್ತಿದ್ದಂತೆ ಅದಕ್ಕೆ ಪೂರಕವಾದಂತಹ ಕೆಲವು ನಂಬಿಕೆಗಳನ್ನು ಹುಟ್ಟುಹಾಕಿಕೊಂಡ. ನಂಬಿಕೆಯು ಗ್ರಾಮೀಣ ಜನರಲ್ಲಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವುದಾಗಿದೆ. ನಂಬಿಕೆಯು ಒಂದು ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷೆಗಳಿಗೆ ಪ್ರಮುಖವಾಗಿರುತ್ತವೆ. ನಂಬಿಕೆಯು ಗ್ರಾಮೀಣ ಜನರ ಜೀವನಾನುಭವದ ಉತ್ಪನ್ನವಾಗಿದೆ. ಹೀಗೆ ಮಾನವನ ಬದುಕಿಗೂ ನಂಬಿಕೆಗೂ ಅವಿನಾಭಾವ ಸಂಬಂಧವಿದೆ. ಅವು ವಿಧಿನಿಷೇಧಗಳು, ನಿರ್ದೇಶನಗಳು, ಆದೇಶ ಮತ್ತು ಆಜ್ಞೆಯ ರೂಪದಲ್ಲಿ ಪ್ರತಿನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿವೆ. ನಂಬಿಕೆ ಎನ್ನುವುದು ಜನಪದರು ಪರಂಪರಾಗತವಾಗಿ ಒಪ್ಪಿಕೊಂಡು ಬಂದಿರುವ ತಿಳುವಳಿಕೆ. ಅನೇಕ ಕೆಲಸಗಳನ್ನು ಕೈಗೊಳ್ಳುವಲ್ಲಿ ಹಾಗೂ ಯಶಸ್ಸನ್ನು ಹೊಂದಲು ಪುಷ್ಟೀಕರಣ ನೀಡುತ್ತವೆ. ಮಾನವನ ಮೂಲ ಪ್ರವೃತ್ತಿಯು ಪ್ರಕೃತಿಯಲ್ಲಾದ ಬದಲಾವಣೆ ಹಾಗೂ ಅದರಿಂದುಂಟಾದಂತಹ ಅನುಭವಗಳ ಆಧಾರದ ಮೇಲೆ ನಂಬಿಕೆಗಳು ಹುಟ್ಟಿಕೊಂಡವು. ಇವು ಕಾಲಕ್ರಮೇಣ ಜನಪದರ ಜೀವನದಲ್ಲಿ ಅನೇಕ ಬದಲಾವಣೆ ಪಡೆದುಕೊಂಡು ಪ್ರಸ್ತುತ ದಿನಮಾನದಲ್ಲಿ ಜನಪದರ ಜೀವನಾಡಿಯಾಗಿ ಬದಲಾಗಿವೆ. ನಂಬಿಕೆ ಹಿನ್ನೆಲೆಯ ಆಚರಣೆಗಳನ್ನು ಕೈಬಿಡಲು ಜನರ ಮನದಲ್ಲಿ ಭಯವಿದೆ. ಏಕೆಂದರೆ ಬಹುಪಾಲು ನಂಬಿಕೆಗಳು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿವೆ. ಆದ್ದರಿಂದ ನಂಬಿಕೆಗಳು ಜನರಲ್ಲಿ ಗಾಢವಾಗಿ ಬೇರೂರಿವೆ. ನಂಬಿಕೆಗಳ ಕಾರ್ಯ ರೂಪಗಳೇ ಆಚರಣೆಗಳಾಗಿವೆ ಎಂದು ಹೇಳಬಹುದು.

## KEYWORDS:

ಜನಪದ ಆಚರಣೆ, ಜನಪದ ನಂಬಿಕೆ, ಸಂಪ್ರದಾಯಗಳು, ವಿಧಿನಿಷೇಧಗಳು, ಸಂಸ್ಕೃತಿ, ಸಮುದಾಯ, ದೈವ.

ಸಂಪ್ರದಾಯಗಳು, ಆಚರಣೆಗಳು ಮತ್ತು ನಂಬಿಕೆಗಳು ಸಮಾಜ ಹಾಗೂ ಸಮುದಾಯಗಳನ್ನು ಒಗ್ಗೂಡಿಸುವ ಶಕ್ತಿಯನ್ನು ಹೊಂದಿವೆ. ಆಚರಣೆಗಳು ಸಂಸ್ಕೃತಿಯನ್ನು ಬೆಳೆಸಿ ನಾಗರಿಕ ಸಮಾಜ ಸೃಷ್ಟಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವು ಮನುಷ್ಯನ ಬಾಳಿನ ಅವಿಭಾಜ್ಯ ಅಂಗವಾಗಿಯೂ ಕಂಡುಬರುತ್ತವೆ. ಆಚರಣೆಗಳ ಮೂಲ ನಂಬಿಕೆಯಾಗಿದೆ, ನಂಬಿಕೆಯ ಆಧಾರವಾಗಿಯೇ ಎಲ್ಲ ಗ್ರಾಮಗಳಲ್ಲಿ ಆಚರಣೆಗಳು, ವಿಧಿನಿಷೇಧಗಳು ಕಂಡುಬರುತ್ತವೆ. "ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು, ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮ ಎನ್ನಬಹುದು. ಆ ಆಚರಣೆಗಳು ನಿರ್ದಿಷ್ಟ ವ್ಯಕ್ತಿಯಿಂದಲೇ ಆಗಬೇಕಾದುದು, ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು". ಆಚರಣೆಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು: ವಾರ್ಷಿಕ ಆಚರಣೆ, ಜೀವನಾವರ್ತನ ಆಚರಣೆ. ಜೀವನಾವರ್ತನವು ಮನುಷ್ಯನು ಹುಟ್ಟಿನಿಂದ ಹಿಡಿದು ಸಾಯುವವರೆಗೂ ನಡೆಯುವ ಆಚರಣೆಗಳನ್ನು ಜೀವನಾವರ್ತನ ಆಚರಣೆಗಳು ಎಂದು ಕರೆಯಲಾಗುತ್ತದೆ. ಇವುಗಳು ಕಾಲಘಟ್ಟಗಳಿಗೆ ಸಿಲುಕಿ ಅನೇಕ ಬದಲಾವಣೆಗಳನ್ನು ಹೊಂದುತ್ತವೆ. ಬದಲಾವಣೆ ಹೊಂದುವ ಸಂದರ್ಭವನ್ನು ಸ್ಥಿತ್ಯಂತರ ಎಂದು ಕರೆಯುತ್ತಾರೆ. ಇಂತಹ ವಿಧಿವಿಧಾನಗಳು, ಆಚರಣೆಗಳು, ನಂಬಿಕೆಗಳು ಕಾಲಕಾಲಕ್ಕೆ ಹಾಗೂ ಸ್ಥಳದಿಂದ ಸ್ಥಳಕ್ಕೆ, ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಗಳು ಕಂಡುಬರುತ್ತವೆ. ಮತಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ ಕರ್ಮವಿಧಿಗಳಿಗೆ ಈ ಹೆಸರು ಎಂದು ಆಚರಣೆಯನ್ನು ಕುರಿತು ಹಿರಿಯ ಜನಪದ ವಿದ್ವಾಂಸರಾದ ಜಿ.ಶಂ.ಪರಮಶಿವಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ. ಮಾನವನ ಹುಟ್ಟಿನಿಂದ ಹಿಡಿದು ಸಾವಿನವರೆಗೆ ನಡೆಯುವ ಅನೇಕ ಚಟುವಟಿಕೆಗಳು ಧಾರ್ಮಿಕ ನಂಬಿಕೆಯೇ ಮೂಲ ಕಾರಣವಾಗಿದೆ. ಧಾರ್ಮಿಕ ನಂಬಿಕೆ ಇಲ್ಲದೆ ಯಾವ ಆಚರಣೆಗಳು ನಡೆಯುವುದಿಲ್ಲ. ಪ್ರತಿಯೊಂದು ಆಚರಣಾತ್ಮಕ ಸಂದರ್ಭಗಳು ವೈಯಕ್ತಿಕವಾಗಿ, ಸಾಮೂಹಿಕವಾಗಿ, ಸಾಮುದಾಯಿಕವಾಗಿ ಹಾಗೂ ಕೌಟುಂಬಿಕವಾಗಿ ಏರ್ಪಡುವ ಆಚರಣೆಗಳು ಗ್ರಾಮ ದೇವತೆ ಹಾಗೂ ಕುಲದೇವತೆಯ ಕೇಂದ್ರವನ್ನಾಗಿ ಮಾಡಿಕೊಂಡು ಕಂಡುಬರುತ್ತವೆ.

ಪ್ರತಿಯೊಂದು ಗ್ರಾಮಗಳಲ್ಲಿ ಯಾವುದೇ ಶುಭ ಕಾರ್ಯ ನಡೆಯುವ ಮೊದಲು ತಮ್ಮ ಮನೆದೇವರಿಗೆ ಮೊರೆ ಹೋಗುವುದು ಸಾಮಾನ್ಯವಾಗಿದೆ. ತಮ್ಮ ಮನೆಯಲ್ಲಿ ನಡೆಯುವ ಶುಭಕಾರ್ಯಕ್ಕೆ ಪ್ರಾರಂಭಗೊಳ್ಳುವ ಮೊದಲು ತಮ್ಮ ಮನೆಯ ದೇವರಿಗೆ ಮೊದಲ ಆದ್ಯತೆ ನಂತರ ಊರಿನ ಇತರ ದೇವರುಗಳಿಗೆ

ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ. ಗ್ರಾಮಗಳಲ್ಲಿ ವಾಸವಾಗಿರುವ ಅನೇಕ ಸಮುದಾಯಗಳು ತಮ್ಮ ಸಮುದಾಯದ ಮೂಲ ಆಚರಣೆಗಳನ್ನು ಮಾಡಿಕೊಂಡು ಬರುತ್ತಿದ್ದು, ಇಲ್ಲಿ ಒಂದಕ್ಕೊಂದು ಹೋಲಿಕೆಯನ್ನು ಆಚರಣಾತ್ಮಕ ಪದ್ಧತಿಗಳಲ್ಲಿ ಕಾಣಬಹುದಾಗಿದೆ. ಪ್ರಬಲ ಸಮುದಾಯಗಳು, ಅವುಗಳ ನಂಬಿಕೆಗಳನ್ನು ಇತರ ಸಣ್ಣ ಸಣ್ಣ ಸಮುದಾಯಗಳ ಮೇಲೆ ಕೆಲವು ಆಚರಣೆಗಳನ್ನು ಬಾಹ್ಯವಾಗಿ ಕಾಲಕ್ರಮೇಣ ಹೇರಲ್ಪಟ್ಟಿರಬಹುದು. ಆದ್ದರಿಂದ ಸಮುದಾಯದಿಂದ ಸಮುದಾಯಕ್ಕೆ ಕೆಲವು ಆಚರಣೆಗಳು, ವಿಧಿನಿಷೇಧಗಳು ಒಂದಕ್ಕೊಂದು ಹೊಂದಾಣಿಕೆಯನ್ನು ಕಾಣಬಹುದಾಗಿದೆ. ವಿಭಿನ್ನತೆಗಳು ಕಂಡುಬಂದರೂ ಸಾಮ್ಯತೆಗಳು ಇರುವ ಆಚರಣೆಗಳನ್ನು ಗುರುತಿಸಬಹುದು.

“ಭಾರತದ ಸಂಸ್ಕೃತಿಯಲ್ಲಿ ಆಚರಣೆ ಮತ್ತು ಸಂಪ್ರದಾಯಗಳು ಸಮಾಜವನ್ನು ಒಂದುಗೂಡಿಸುವ ಶಕ್ತಿಯನ್ನು ನೀಡುತ್ತವೆ. ಸಂಸ್ಕೃತಿಯನ್ನು ಪೋಷಿಸಿ ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿ ಅವನ ಬೆನ್ನೆಲುಬಾಗಿವೆ. ನಂಬಿಕೆಯನ್ನು ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತವೆ. ಹೀಗೆ ವಿವಿಧ ಸಮುದಾಯಗಳಲ್ಲಿ ಗ್ರಾಮದೇವತೆಗಳ ಜಾತ್ರೆಗಳು ಆಚರಣೆಯ ರೂಪದಲ್ಲಿ ನಡೆಯುತ್ತವೆ. ಆಚರಣೆ ಎಲ್ಲರಿಗೂ ಕಡ್ಡಾಯವಾದರೆ, ಹರಕೆಯನ್ನು ಹರಸಿಕೊಂಡವರು ಮಾತ್ರ ನೆರವೇರಿಸುತ್ತಾರೆ. ಆಚರಣೆ ಸಾಮೂಹಿಕವಾದರೆ ಹರಕೆ ವೈಯಕ್ತಿಕವಾದದ್ದಾಗಿದೆ. ಕೊಂಡಹಾಯುವುದು, ಸಿಡಿಯಾಡುವುದು, ಕೊಂಡಕ್ಕೆ ಔಡಲ, ಎಳ್ಳು ಹಾಕುವುದು, ಈಡುಗಾಯಿ ಒಡೆಯುವುದು ಇವೆಲ್ಲಾ ಹರಕೆರೂಪದ ಆಚರಣೆಗಳು. ಇಂತಹ ಆಚರಣೆಗಳು, ಐತಿಹಾಸಿಕ ಅಂಶಗಳನ್ನು ಅಭಿನಯಿಸಿ ತೋರಿಸುತ್ತವೆ. ಕೆಲವು ಮಾರ್ಗಗಳು ಬದಲಾದರೂ, ಉದ್ದೇಶ ಒಂದೇ. ತತ್ವಗಳಲ್ಲಿ ಆಚರಣೆಗಳ ಬಿರುಕುಗಳು ಇದ್ದೇ ಇರುತ್ತವೆ. ಇದಕ್ಕೆ ಕಾರಣ ಬೇರೆ ಬೇರೆ ಕಾಲಘಟ್ಟಗಳಲ್ಲಿ ಉಂಟಾಗುವ ಸೇರ್ಪಡೆಗಳು, ಹೊಸ ಚಾರಿತ್ರಿಕ ಸನ್ನಿವೇಶಗಳು ಮೂಲದರ್ಶನಕ್ಕೆ ಬದಲಾಯಿಸಿಕೊಳ್ಳಲು ಒತ್ತಡ ನೀಡುತ್ತವೆ”.

ಮಾನವನ ಹುಟ್ಟಿನಿಂದ ಹಿಡಿದು ಸಾವಿನವರೆಗೆ ನಡೆಯುವಂತಹ ಆಚರಣೆಗಳು ವೈವಿಧ್ಯತೆಯಿಂದ ಕೂಡಿವೆ. ಒಂದು ಸಮುದಾಯವು ಆಚರಿಸುವ ಆಚರಣೆಗಳು ಒಂದೇ ತರಹದ್ದಾಗಿರುತ್ತವೆ. ಆದರೆ ಆಧುನಿಕತೆಗೆ ಒಳಗಾಗಿ ಬದಲಾದರೂ ಸಹ ಅವುಗಳು ತಮ್ಮ ಮೂಲ ಸ್ವರೂಪವನ್ನು ಹಾಗೆ ಉಳಿಸಿಕೊಳ್ಳುವಲ್ಲಿ ಹೆಣಗಾಡುತ್ತಿವೆ. ಪ್ರತಿ ಹಂತದಲ್ಲಿಯೂ ಮನುಷ್ಯನು ತನ್ನ ಜೀವನದ ಉದ್ದಕ್ಕೂ ನಡೆದುಕೊಂಡು ಬರುವಂತಹ ಆಚರಣೆಗಳನ್ನು ಜೀವನಾವರ್ತನ ಆಚರಣೆಗಳು ಎಂದು ಕರೆಯುತ್ತಾರೆ. ಆಚರಣೆಗಳು ಆಧುನಿಕತೆಯಲ್ಲಿ ಅನೇಕ ಬದಲಾವಣೆಯನ್ನು

ಕಂಡುಕೊಂಡರೂ ಆಚರಣೆಯ ವಿಧಾನಗಳನ್ನು ಸ್ವಲ್ಪ ಬದಲಾಯಿಸಿದರು ಸಹ ಅವುಗಳ ಮೂಲ ಉದ್ದೇಶ ಒಂದೇ ಆಗಿರುವುದನ್ನು ಕಾಣಬಹುದಾಗಿದೆ. “ಎಲ್ಲಾ ಧರ್ಮ ಹಾಗೂ ಪಂಥಗಳಲ್ಲೂ ತತ್ವ ಹಾಗೂ ಆಚರಣೆಗಳ ಬಿರುಕು ಇದ್ದೇ ಇರುತ್ತದೆ. ಇದಕ್ಕೆ ಕಾರಣ ಮೂಲವರ್ಗಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಉಂಟಾಗುವ ಸೇರ್ಪಡೆಗಳು, ಹೊಸ ಚಾರಿತ್ರಿಕ ಸನ್ನಿವೇಶಗಳು ಮೂಲ ದರ್ಶನವನ್ನು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಒತ್ತಡ ಹಾಕುತ್ತವೆ. ಹೀಗೆ ಸೇರಿಸುವಿಕೆ, ಬದಲಿಸುವಿಕೆಗಳು ನಿರಂತರ ನಡೆಯುತ್ತಾ ಪಂಥವೊಂದರ ದರ್ಶನವು ಪರಿವರ್ತನೆ ಪಡೆಯುತ್ತಾ ಹೋಗುತ್ತದೆ”. ಹೀಗೆ ಅನೇಕ ಬದಲಾವಣೆಗಳನ್ನು ಕಂಡುಕೊಂಡರೂ ಸಹ ಮಾನವನು ಆಧುನಿಕ ಯುಗದಲ್ಲಿ ಅವನು ಆಚರಿಸುವ ಅನೇಕ ಅರ್ಥಹೀನ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರುವುದನ್ನು ನಾವು ನೋಡಬಹುದು. ಇದಕ್ಕೆ ಮೂಲ ಕಾರಣ ವ್ಯಕ್ತಿಯು ತಾನು ಈ ವಿಧಾನದ ಮೇಲೆ ಇಟ್ಟಿರುವ ನಂಬಿಕೆ, ಆಚರಣೆಗಳನ್ನು ಕಾಲಕಾಲಕ್ಕೆ ಮಾಡದಿದ್ದರೆ ಏನಾದರೂ ಅಪಾಯಗಳು ಒದಗಬಹುದು ಎಂಬ ಭ್ರಮೆಯಲ್ಲಿ ಬದುಕುತ್ತಿರುವ ಮನುಷ್ಯ ಕಾಲಕ್ರಮೇಣ ಒಂದೊಂದಾಗಿ ಆಚರಣೆಯ ವಿಧಾನಗಳನ್ನು ಬದಲಾವಣೆಗೆ ಒಳಪಡಿಸುತ್ತಾ ಬಂದಿರುವುದು ಕಂಡುಬರುತ್ತದೆ.

ಆಚರಣೆಗಳನ್ನು ಅನೇಕ ವಿಧಗಳನ್ನಾಗಿ ವಿಂಗಡಿಸಬಹುದು: ವೈಯಕ್ತಿಕ, ಸಾಮಾಜಿಕ, ಕೌಟುಂಬಿಕ, ವ್ಯವಸಾಯಕ್ಕೆ ಸಂಬಂಧಿಸಿದ, ಧಾರ್ಮಿಕ ಆಚರಣೆಗಳು ಹೀಗೆ ಅನೇಕ ವಿಧಗಳು ಕಂಡುಬರುತ್ತವೆ. ಆದರೆ ಈ ಮೇಲಿನ ಆಚರಣೆಗಳು ಒಂದಕ್ಕೊಂದು ಪೂರಕ ಸಂಬಂಧವನ್ನು ಹೊಂದಿದ್ದರೂ ಸಹ ಕೊಂಚ ಭಿನ್ನವಾಗಿ ಕಂಡುಬರುವುದನ್ನು ನೋಡಬಹುದಾಗಿದೆ. ಅಷ್ಟೇ ಅಲ್ಲದೆ ಆಚರಣೆಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಲಿಸಿದರೆ ಭಿನ್ನತೆಗಳನ್ನು ಕಾಣಬಹುದು. ಅದೇ ರೀತಿ ಸಾಮ್ಯತೆಗಳು ಕಂಡುಬರುತ್ತವೆ. ದೇಶದ ಗ್ರಾಮಗಳೆಲ್ಲವು ಕೃಷಿ ಪ್ರಧಾನವಾಗಿರುವುದರಿಂದ ಇಲ್ಲಿ ಕೃಷಿ ಸಂಬಂಧಿ ಆಚರಣೆಗಳು, ರೋಗ ಸಂಬಂಧಿ ಆಚರಣೆಗಳು, ಹಬ್ಬ, ಜಾತ್ರೆ ಇನ್ನು ಮುಂತಾದ ವಾರ್ಷಿಕ ಮತ್ತು ಜೀವನಾವರ್ತನ ಆಚರಣೆಗಳನ್ನು ಕಾಣಬಹುದು.

**ವಾರ್ಷಿಕಾವರ್ತನ ಆಚರಣೆಗಳು:**

ವಾರ್ಷಿಕಾವರ್ತನ ಆಚರಣೆಗಳು ಎಂದರೆ ಪ್ರತಿವರ್ಷ ಮರುಕಳಿಸಿ ಬರುವಂತಹ ಆಚರಣೆಗಳಾಗಿವೆ. ಭಾರತೀಯ ಸಂಸ್ಕೃತಿಯಲ್ಲಿ ಆಚರಣೆಗಳನ್ನು ಹಬ್ಬದ ದಿನದಂದು ಆಚರಿಸುತ್ತೇವೆ. ಈ ಹಬ್ಬಗಳು ಅಮಾವಾಸ್ಯೆ, ಹುಣ್ಣಿಮೆ, ತಿಥಿಗಳ ಆಧಾರವಾಗಿ ನಿರ್ದಿಷ್ಟ ಸಮಯಕ್ಕೆ ಆಚರಣೆಗಳು ಮರುಕಳಿಸುತ್ತವೆ. ನಮ್ಮ

ಪೂರ್ವಿಕರು ಪ್ರತಿಯೊಂದು ಹಬ್ಬಗಳನ್ನು ಋತುಮಾನಕ್ಕೆ ತಕ್ಕಂತೆ ಆಚರಣೆಗೆ ಒಳಪಡಿಸಲು ಕಾರಣವೆಂದರೆ, ಕಾಲಮಾನವನ್ನು ಲೆಕ್ಕ ಹಾಕುವ ಸಲುವಾಗಿ ವಾರ್ಷಿಕ, ಅರ್ಧವಾರ್ಷಿಕ, ತ್ರೈಮಾಸಿಕ, ಮಾಸಿಕ ದಿನಗಳನ್ನು ತಿಳಿದುಕೊಳ್ಳಲು ಈ ಹಬ್ಬಗಳನ್ನು ಮಾಡಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಹಬ್ಬಗಳನ್ನು ಅಮಾವಾಸ್ಯೆ ಮತ್ತು ಹುಣ್ಣಿಮೆಯನ್ನು ಆಧಾರವಾಗಿ ಇರಿಸಿಕೊಂಡು ಆಚರಿಸಲಾಗುತ್ತದೆ. ಅಮಾವಾಸ್ಯೆ, ಹುಣ್ಣಿಮೆಗಳನ್ನು ಋತುಮಾನಕ್ಕೆ ಅನುಗುಣವಾಗಿ ಪ್ರತಿವರ್ಷವೂ ಆಚರಿಸುತ್ತಾರೆ. ನಮ್ಮ ಪೂರ್ವಿಕರಲ್ಲಿ ಪ್ರಕೃತಿಯ ಕೆಲವು ವಿಷಯಗಳಾದ ಮಳೆ, ಚಳಿ, ಬಿಸಿಲು ಇವುಗಳ ಸರಿಯಾದ ಬಳಕೆಯನ್ನು ಪಡೆಯುವುದಕ್ಕಾಗಿ ಈ ಆಚರಣೆಗಳು ರೂಢಿಗೆ ಬಂದವು ಎಂದು ಹೇಳಬಹುದು.

ಹಬ್ಬಗಳು ಪ್ರತಿವರ್ಷ ವಿಶೇಷ ಸಂದರ್ಭಗಳಲ್ಲಿ ಸಾಮಾಜಿಕ ಕ್ಷೇಮಕ್ಕಾಗಿ ಆಚರಿಸಲ್ಪಡುತ್ತವೆ. ಬಂಧುಬಳಗವು ಸೇರುವ, ರಕ್ತ ಸಂಬಂಧಿಕರು ಒಟ್ಟುಗೂಡಿಸುವ ಸಂದರ್ಭ, ಊರು ಕೇರಿಗಳನ್ನು ಹತ್ತಿರ ತರುವ ಸಂದರ್ಭ, ಸಂತೋಷದ ಸಂದರ್ಭ ಎಂದು ನಿರ್ದಿಷ್ಟಪಡಿಸಿದ ದಿನಗಳಲ್ಲಿ ಆಚರಿಸುವ ಶುಭಕಾರ್ಯದ ಸಂಕೇತವಾಗಿ ಹಬ್ಬಗಳು ನಡೆದು ಬಂದಿವೆ ಹಾಗೂ ನಡೆಯುತ್ತಲೇ ಇವೆ. ಊರಿನ ಜನರೆಲ್ಲರಿಗೂ ಬಂಧು ಮಿತ್ರರಿಗೂ ಶುಭಕೋರುವ ಹಬ್ಬಗಳು ಮನೆಯೊಳಗೆ ಆಚರಿಸುವಂತಹವು. ಕೆಲವು ಹಬ್ಬಗಳು ಊರಿನ ಪ್ರತಿಯೊಂದು ಕೋಮಿನವರನ್ನು ಆಚರಿಸುವಂತೆ ಮಾಡುತ್ತವೆ. ಹಬ್ಬದಲ್ಲಿ ಊಟವೇ ಮುಖ್ಯ. ಅದಕ್ಕೆಂದೇ ವಿಶೇಷವಾದ ಊಟವನ್ನು ಹಬ್ಬದೂಟ ಎಂದು ಕರೆಯುವುದು ವಾಡಿಕೆಯಾಗಿದೆ. ಕೇವಲ ಉಂಡು, ಉಟ್ಟು, ತೇಲಿ ನಲಿದಾಡುವುದಷ್ಟೇ ಅಲ್ಲಾ ಹಬ್ಬಗಳಲ್ಲಿ ಪ್ರತಿ ನಿಯಮಗಳನ್ನು ಎಲ್ಲಾ ದಿನಗಳಲ್ಲಿ ಅಲ್ಲದಿದ್ದರೂ ಕೆಲವೊಂದು ವಿಶೇಷ ದಿನಗಳಲ್ಲಿಯಾದರೂ ಪಾಲಿಸಿ ಕಡ್ಡಾಯವಾಗಿ ದೇಹದಂಡನೆಯ ಮೂಲಕ ಅಥವಾ ಹಬ್ಬಕ್ಕೆ ಕಾರಣವಾದ ಸಂಗತಿಯ ಬಗ್ಗೆ ಗೌರವ ಭಾವನೆಯನ್ನು ವ್ಯಕ್ತಪಡಿಸುವ ತನಗೆ ತಾನೇ ಆತ್ಮಸಂತೋಷ ಪಡುವ ಅನೇಕ ನಿಯಮಗಳನ್ನು ಕಲ್ಪಿಸಿಕೊಡುವಂತಹ ಆಚರಣೆಗಳೇ ಹಬ್ಬಗಳು. ಸ್ನಾನ, ವಂದನೆ, ಜಪ, ತಪ, ಪೂಜೆ ಇತ್ಯಾದಿಗಳೊಂದಿಗೆ ಬಾಹ್ಯ ಹಾಗೂ ಅಂತಃಶುದ್ಧಿಗೊಳ್ಳುವ ಕ್ರಮಗಳನ್ನು ಹಬ್ಬಗಳು ಅರ್ಥೈಸಿಕೊಡುತ್ತವೆ ಹಾಗೂ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿಯನ್ನು ನೀಡುತ್ತವೆ.

**ಜೀವನಾವರ್ತನ ಆಚರಣೆಗಳು:**

ಮಾನವನ ಜೀವನದಲ್ಲಿ ಆಚರಣೆಗಳು ಪ್ರಮುಖ ಘಟ್ಟಗಳಾಗಿವೆ. ಏಕೆಂದರೆ ಮಾನವ ಹುಟ್ಟಿನಿಂದ ಹಿಡಿದು ಸಾವಿನವರೆಗೆ ಹಾಗೂ ಸಾವಿನ ನಂತರವೂ ಒಂದಲ್ಲಾ ಒಂದು ಆಚರಣೆಗೆ ಒಳಪಡುತ್ತಾನೆ. ಸಂತೋಷದ ಕ್ಷಣದಲ್ಲಿ, ದುಃಖದ ಸಂದರ್ಭದಲ್ಲಿ

ಹಲವು ಆಚರಣೆಗಳು ಕಂಡುಬರುತ್ತವೆ. ಹುಟ್ಟು, ಋತುಮತಿ, ಮದುವೆ, ಸೀಮಂತ, ಸಾವು ಹಾಗೂ ಸಾವಿನ ನಂತರದ ಅನೇಕ ಆಚರಣೆಗಳನ್ನು ಪ್ರಸ್ತುತ ದಿನಮಾನದಲ್ಲಿಯೂ ಸಹ ಜಾರಿಯಲ್ಲಿವೆ. ಅಂದರೆ ಮಾನವನು ತನ್ನ ಜೀವನದ ಪ್ರಮುಖ ಘಟ್ಟಗಳಲ್ಲಿ ಹಾಗೂ ಕೆಲವು ಸನ್ನಿವೇಶಗಳನ್ನು ಅನುಭವಿಸಲು ಆಚರಣೆಯ ನೆಪದಲ್ಲಿ ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಈ ಆಚರಣೆಗಳು ಒಬ್ಬ ವ್ಯಕ್ತಿಯ ಜೀವನದಲ್ಲಿ ಒಂದೇ ಸಾರಿ ಬರುವಂತಹವು. ಉದಾಹರಣೆಗೆ ಹುಟ್ಟಿನ ಸಂದರ್ಭದ ಆಚರಣೆ ಹಾಗೂ ಸಾವಿನ ಸಂದರ್ಭದ ಆಚರಣೆಗಳನ್ನು ನಾವು ನೋಡಿದಾಗ ಜೀವಿತಾವಧಿಯಲ್ಲಿ ಒಂದೇ ಸಾರಿ ಆಚರಿಸಲ್ಪಡುವ ಆಚರಣೆಗಳಾಗಿವೆ. ಸಾವಿನ ನಂತರದ ಕೆಲವು ಆಚರಣೆಗಳಾದ ಶವ ಸಂಸ್ಕಾರ, ಮೂರು ದಿನದ ತಿಥಿ, ಒಂಬತ್ತು ದಿನದ ತಿಥಿ, ದೇವರು ಕೂಡಿಸುವುದನ್ನು ಸಹ ಜೀವನಾವರ್ತನ ಆಚರಣೆಗಳು ಎಂದು ಕರೆಯಬಹುದು.

ಮನುಷ್ಯ ಎಷ್ಟೇ ವಿದ್ಯಾವಂತನಾದರೂ, ತಾನು ಆಧುನಿಕತೆಗೆ ಹೊಂದಿಕೊಂಡರೂ ನಮ್ಮ ಪೂರ್ವಿಕರು ತಲೆತಲಾಂತರದಿಂದ ಪಾಲಿಸಿಕೊಂಡು ಬಂದಿರುವಂತಹ ಆಚರಣಾತ್ಮಕ ವಿಧಿ ನಿಷೇಧಗಳು ಪ್ರಸ್ತುತ ಸಂದರ್ಭದಲ್ಲಿಯೂ ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಕಾರಣ ಈ ನಿಷೇಧಗಳು ಕೆಲವೊಂದು ಸಂದರ್ಭದಲ್ಲಿ ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿರುವುದರಿಂದಾಗಿ ನಾವು ಎಷ್ಟೇ ಮುಂದುವರೆದರೂ ವೈಜ್ಞಾನಿಕ ಕಾರಣಗಳು ಇಲ್ಲದಿದ್ದರೂ ಅವುಗಳನ್ನು ಪಾಲಿಸುತ್ತಿರಲು ಕಾರಣ, ನಮ್ಮ ಪೂರ್ವಿಕರು ಯಾವುದೋ ಪ್ರಬಲ ಕಾರಣದಿಂದ ಇಂತಹ ವಿಧಿ ನಿಷೇಧಗಳನ್ನು ಮಾಡಿರುವುದರ ಬಗ್ಗೆ ನಂಬಿಕೆಯಿದೆ. ಆದರೂ ಸಹ ಕೆಲವು ಸಂದರ್ಭಗಳಲ್ಲಿ ಅನೇಕ ವಿಧಿ ನಿಷೇಧಗಳು ಮರೆಮಾಚಿ ಹೋಗುತ್ತಿವೆ. ವಿದ್ಯಾವಂತರು, ವೈಚಾರಿಕವಾದಿಗಳು, ನಂಬಿಕೆ ವಿಧಿ ನಿಷೇಧಗಳನ್ನು ಪಾಲಿಸದೇ ಇರುವುದು ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಡಾ. ಸಿದ್ದಲಿಂಗಯ್ಯ, (2015), ಗ್ರಾಮದೇವತೆಗಳು, ಅಂಕಿತ ಪುಸ್ತಕ ಪ್ರಕಾಶಕರು, ಬೆಂಗಳೂರು.
2. ವಿದ್ವಾನ್ ವಿ.ಎಸ್. ಭಟ್, (2002), ಭಾರತೀಯ ಹಬ್ಬಗಳ ವೈಶಿಷ್ಟ್ಯ, ವಿಶ್ವನಾಥ ಪ್ರಕಾಶನ, ಶಿವಮೊಗ್ಗ.
3. ರಹಮತ್ ತರೀಕೆರೆ, (2005), ಕರ್ನಾಟಕ ನಾಥಪಂಥ, ಅಭಿನವ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.